# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/173/ಸಾ.ಸ./2023-24

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 27.02.2024

ಗೆ,
ಸಿಂಡಿಕೇಟ್ ಸದಸ್ಯರುಗಳು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ 20.02.2024 ರಂದು ನಡೆದ 173ನೇ ಸಿಂಡಿಕೇಟ್ ಸಭೆಯ ನಡಾವಳಿಗಳ ವಿಷಯ ಸಂಖ್ಯೆ 3 ಕ್ಕೆ ತಿದ್ದುಪಡಿ ಕುರಿತು.

ಉಲ್ಲೇಖ:
1. ವಿಶ್ವವಿದ್ಯಾಲಯ ಪತ್ರ ಸಂಖ್ಯೆ: ಎಸ್‌ವೈಎನ್/ಎಸ್1/173/ಸಾ.ಸ./2023-24 ದಿನಾಂಕ 26.02.2024.
2. ಕುಲಪತಿಗಳ ಅನುಮೋದನೆ ದಿನಾಂಕ 2.3.2024.

****

ವಿಶ್ವವಿದ್ಯಾಲಯ ಉಲ್ಲೇಖಿತ ಪತ್ರವನ್ನು ಮುಂದುವರೆಸಿ, ದಿನಾಂಕ 20.02.2024 ರಂದು ಬೆಳಗ್ಗೆ 11.00 ಗಂಟೆಗೆ ನಡೆದ ಸಿಂಡಿಕೇಟ್ ಸಭೆಯ ವಿಷಯಸೂಚಿ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ನಡಾವಳಿಗಳನ್ನು ಈ ಕೆಳಕಂಡ ತಿದ್ದುಪಡಿಯೊಂದಿಗೆ ಓದಿಕೊಳ್ಳತಕ್ಕದ್ದು.

| **ವಿಷಯ ಸಂಖ್ಯೆ: 3** | |
|---|---|
| ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿ), ಬೆಂಗಳೂರು ಇವರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಶ್ರೀ ವೆಂಕಟರಾಮಣ್ಣ ಇವರಿಗೆ ಬದಲಾಗಿ ನೇಮಕ ಮಾಡುವ ಬಗ್ಗೆ. | |
| **ಹೊರಡಿಸಲಾದ ನಡಾವಳಿ** | **ತಿದ್ದುಪಡಿ** |
| ಕುಲಸಚಿವರು ಮಾತನಾಡಿ, ಆಯ-ವ್ಯಯ, ಲೆಕ್ಕ ಸಮನ್ವಯಗೊಳಿಸುವಿಕೆ, ಜಿ.ಎಸ್.ಟಿ., ನಿಶ್ಚಿತ ಠೇವಣಿ ಹೂಡಿಕೆ, ಈ ವಿಷಯಗಳಲ್ಲಿ ಪರಿಣಿತರ ಸೇವೆಯು ಅವಶ್ಯಕವೆಂದು ವಿತ್ತಾಧಿಕಾರಿಗಳು ಶಿಫಾರಸ್ಸು ಮಾಡಿದ್ದ ಕಾರಣ, ಹಾಗೂ ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟರಾಮಣ್ಣ, ನಿವೃತ್ತ ಉಪ ನಿಯಂತ್ರಕರು, ಲೆಕ್ಕ ಪತ್ರಗಳ ಇಲಾಖೆ, ಇವರ ಸೇವೆಯು 31.03.2024ಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ, ಇವರ ಜಾಗದಲ್ಲಿ ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿವೃತ್ತ), | ಕುಲಸಚಿವರು ಮಾತನಾಡಿ, ಆಯ-ವ್ಯಯ, ಲೆಕ್ಕ ಸಮನ್ವಯಗೊಳಿಸುವಿಕೆ, ಜಿ.ಎಸ್.ಟಿ., ನಿಶ್ಚಿತ ಠೇವಣಿ ಹೂಡಿಕೆ, ಈ ವಿಷಯಗಳಲ್ಲಿ ಪರಿಣಿತರ ಸೇವೆಯು ಅವಶ್ಯಕವೆಂದು ವಿತ್ತಾಧಿಕಾರಿಗಳು ಶಿಫಾರಸ್ಸು ಮಾಡಿದ್ದ ಕಾರಣ, ಹಾಗೂ ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟರಾಮಣ್ಣ, ನಿವೃತ್ತ ಉಪ ನಿಯಂತ್ರಕರು, ಲೆಕ್ಕ ಪತ್ರಗಳ ಇಲಾಖೆ, ಇವರ ಸೇವೆಯು 31.03.2024ಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ, ಇವರ ಜಾಗದಲ್ಲಿ ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿವೃತ್ತ), |

| | |
|---|---|
| ಕೆ.ಎಸ್.ಎಫ್.ಸಿ. ಇವರನ್ನು ವಿತ್ತಾಧಿಕಾರಿಯವರ ಶಿಫಾರಸ್ಸಿನಂತೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸಮಾಲೋಚಕರಾಗಿ (ಲೆಕ್ಕ ಸಮನ್ವಯಕ್ಕೋಸ್ಕರ) ಮಾಹೆಯಾನ ರೂ.55,000/- ಸಂಭಾವನೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಆದೇಶವನ್ನು ಸಿಂಡಿಕೇಟ್ ಅನುಸಮರ್ಥನೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.<br><br>**ನಿರ್ಣಯ:**<br><br>ಚರ್ಚೆಯ ನಂತರ, ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿವೃತ್ತ), ಕೆ.ಎಸ್.ಎಫ್.ಸಿ. ಬೆಂಗಳೂರು, ಇವರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಶ್ರೀ ವೆಂಕಟರಾಮಣ್ಣ ಇವರ ಬದಲಾಗಿ ದಿನಾಂಕ: 01.02.2024ರಿಂದ ಒಂದು ವರ್ಷದ ಅವಧಿಗೆ ನೇಮಕ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. | ಕೆ.ಎಸ್.ಎಫ್.ಸಿ. ಇವರನ್ನು ವಿತ್ತಾಧಿಕಾರಿಯವರ ಶಿಫಾರಸ್ಸಿನಂತೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸಮಾಲೋಚಕರಾಗಿ (ಲೆಕ್ಕ ಸಮನ್ವಯಕ್ಕೋಸ್ಕರ) ಮಾಹೆಯಾನ ರೂ.55,000/- ಸಂಭಾವನೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಆದೇಶವನ್ನು ಸಿಂಡಿಕೇಟ್ ಅನುಸಮರ್ಥನೆಗೆ ಮಂಡಿಸಲಾಗಿದೆಯೆಂದು ತಿಳಿಸಿದರು. ಅವರು ಮುಂದುವರೆದು ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಸಮನ್ವಯಗೊಳಿಸುವಿಕೆ ಹಾಗೂ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ ತಯಾರಿಸಲು ಸಹಕರಿಸುವುದಕ್ಕೆ ವಿತ್ತಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಲೆಕ್ಕಪತ್ರ ಇಲಾಖೆಯಿಂದ ನಿವೃತ್ತರಾದ ಇಬ್ಬರು ನುರಿತ ಲೆಕ್ಕಪರಿಶೋಧಕರ ಸೇವೆಯನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್ ಇವರಿಂದ ಪಡೆದುಕೊಳ್ಳಲು ಸಿಂಡಿಕೇಟ್ ಅನುಮತಿಯನ್ನು ಕೋರಿದರು.<br><br>**ನಿರ್ಣಯ:**<br><br>ಚರ್ಚೆಯ ನಂತರ, ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿವೃತ್ತ), ಕೆ.ಎಸ್.ಎಫ್.ಸಿ. ಬೆಂಗಳೂರು, ಇವರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಶ್ರೀ ವೆಂಕಟರಾಮಣ್ಣ ಇವರ ಬದಲಾಗಿ ದಿನಾಂಕ: 01.02.2024ರಿಂದ ಒಂದು ವರ್ಷದ ಅವಧಿಗೆ ನೇಮಕ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿ, ವಿತ್ತಾಧಿಕಾರಿಗಳ ಶಿಫಾರಸ್ಸಿನನ್ವಯ ಕರ್ನಾಟಕ ಲೆಕ್ಕಪತ್ರ ಇಲಾಖೆಯಿಂದ ನಿವೃತ್ತರಾದ ಇಬ್ಬರು ನುರಿತ ಲೆಕ್ಕಪರಿಶೋಧಕರ ಸೇವೆಯನ್ನು ಸೂಕ್ತ ಸಂಭಾವನೆಯೊಂದಿಗೆ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್ ಇವರಿಂದ ಪಡೆದುಕೊಳ್ಳಲು ಸಿಂಡಿಕೇಟ್ ಅನುಮತಿಸಿತು. |

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ಕುಲಸಚಿವರು